ದಕ್ಕೆ ಯಾವ ಯಾವ ಏರ್ಪಾಡುಗಳನ್ನು ಕೈಗೊಂಡಿದ್ದೀರಿ ?

ಶ್ರೀ ಎಚ್. ಎಸ್. ರುದ್ರಪ್ಪ.—ಕೆಲವು ಕಡೆಗಳಲ್ಲಿ ಹುಡುಗರಿಗೆ ಅಭ್ಯಾಸಮಾಡಿಸುವುದಕ್ಕಾಗಿ ಪಾಠಶಾಲೆಗಳನ್ನು ತೆರೆದಿದ್ದೇವೆ. ಕರಾವಳಿ ಪ್ರದೇಶಗಳಲ್ಲಿ ಇಲಾಖೆಗಳ ಮೂಲಕ ಹುಡುಗರಿಗೆ ಶಿಕ್ಷಣವನ್ನು ಕೊಡುವುದಕ್ಕೆ ಏರ್ಪಾಡು ಮಾಡಿದ್ದೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಸರಿಯಾದ ಕೇಂದ್ರಗಳಲ್ಲಿ ಮಾನಿನ ಬಂದರುಗಳನ್ನು ಅಭಿವೃದ್ಧಿಗೊಳಿಸುವಾಗ, ಅಲ್ಲಿನ ಕೇಂದ್ರಗಳಲ್ಲಿಯೂ ಮಾನಿನ ಕೈಗಾರಿಕೆಯ ಸಂಬಂಧವಾಗಿ ಶಿಕ್ಷಣವನ್ನು ಕೊಡಲು ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಎಸ್. ರುದ್ರಪ್ಪ.—ಈಗ ತಯಾರಾಗಿರುವ ಸ್ಕೀಮಿನ ಪ್ರಕಾರ ಹುಡುಗರಿಗೆ ತರಪೇತು ಕೊಡುತ್ತಿದ್ದೇವೆ. ಈ ಕೈಗಾರಿಕೆಯಲ್ಲಿ ಇನ್ನೂ ಹೆಚ್ಚಿಗೆ ಶ್ರದ್ಧೆವಹಿಸಿ ಜನರು ತಾವಾಗಿ ಶಿಕ್ಷಿತರಾಗಲು ಮುಂದೆ ಬಂದರೆ ಹೆಚ್ಚು ಶಿಕ್ಷಣವನ್ನು ಕೊಡಲಾಗುತ್ತದೆ.

Fuel supply to Mangalore Tile Factories, Sagar.

Q.—29. Sri MALLIKARJUNAPPA GOWDA (Sorab-Shikaripur).—

Will the Government be pleased to state :—

(*a*) whether the Forest Department previously used to supply fuel at concession rates to the Mangalore Tile Factories at Sagar for the development of industries in malnad ;

(*b*) the rates at which they were supplying ;

(*c*) at what enhanced rates they are supplying now ;

(*d*) whether they would arrange for the supply of fuel at concession rates ?

A.—Sri H. S. RUDRAPPA (Minister for Agriculture).—

(*a*) Yes.

(*b*) Re. 0-8-0 per cart load or Re. 1 per ton.

(*c*) At the rate of Rs. 2 per ton.

(*d*) No.

ಶ್ರೀ ಮಲ್ಲಿಕಾರ್ಜುನಪ್ಪ ಗೌಡ.—ಸೌದೆಯನ್ನು ಟನ್ ಒಂದಕ್ಕೆ ಎರಡು ರೂಪಾಯಿಗಳ ಹೆಚ್ಚಿಗೆ ದರದಲ್ಲಿ ಒದಗಿಸುತ್ತಿದ್ದಾರೆ ಎಂದು ಉತ್ತರದಲ್ಲಿ ಹೇಳಿದೆ. ಆ ರೀತಿ ಹೆಚ್ಚಿಗೆ ದರದಲ್ಲಿ ಒದಗಿಸಲು ಕಾರಣವೇನು ?

ಶ್ರೀ ಎಚ್. ಎಸ್. ರುದ್ರಪ್ಪ.—ಇತರ ಕಡೆಗಳಲ್ಲಿ ದರವಿರುವ ಹಾಗೆ ಅಲ್ಲಿಯೂ ಒದಗಿಸಿದ್ದೇವೆ.

ಶ್ರೀ ಮಲ್ಲಿಕಾರ್ಜುನಪ್ಪ ಗೌಡ.—ಮೊದಲು ಟನ್ ಒಂದಕ್ಕೆ ಒಂದು ರೂಪಾಯಿ ಇದ್ದುದು ಈಗ ಟನ್ ಒಂದಕ್ಕೆ ಎರಡು ರೂಪಾಯಿಗಳು ಆಗಿರುವುದು ನಿಜವೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಹಿಂದೆ ಆ ರೀತಿ ರಿಯಾಯಿತಿ ದರದಲ್ಲಿ ಕೊಟ್ಟಿದ್ದೆವು. ಈಚೆಗೆ ಬಹಳ ದಿವಸಗಳಿಂದ ಅದನ್ನು ಬದಲಾವಣೆ ಮಾಡಬೇಕೆಂದು ಇದ್ದೆವು. ಈಗ ರಿಯಾಯಿತಿ ದರ ಕೊಡುವುದಕ್ಕೆ ಅವಕಾಶವಿಲ್ಲ. ಅದರಿಂದ ಜನರಿಗೆ ಉಪಯೋಗವೂ ಇಲ್ಲ.

ಶ್ರೀ ಮಲ್ಲಿಕಾರ್ಜುನಪ್ಪ ಗೌಡ.—ಹೆಂಚಿನ ಕಾರ್ಖಾನೆಗೆ ಮಲೆನಾಡಿನ ಕೈಗಾರಿಕೆಯ ದೃಷ್ಟಿಯಿಂದ ಸೌದೆಯನ್ನು ಸರಬರಾಯಿ ಮಾಡುತ್ತಿರುವುದರ ದರವನ್ನು ಹೆಚ್ಚಿಗೆ ಮಾಡಿದ್ದರಿಂದ ಮಲೆನಾಡಿನಲ್ಲಿ ಹುಲ್ಲಿನ ಮನೆಯಲ್ಲಿರುವವರು ಹೆಂಚಿನ ಮನೆಗಳನ್ನು ಕಟ್ಟಿಕೊಳ್ಳಲು ಕಷ್ಟವಾಗಿರುವುದರಿಂದ ಆದಷ್ಟು ಕಡಮೆದರದಲ್ಲಿ ಸೌದೆ ಒದಗಿಸದೆ ಇದ್ದರೆ ತೊಂದರೆಯಾಗುತ್ತದೆಂಬುದು ಗೊತ್ತಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ತಮಗೇ ಗೊತ್ತಿದೆ, ನಾವು ಅದರಮೇಲೆ ಹಾಕಿರತಕ್ಕ ಭಾರ್ಜು ಕೇವಲ ಟನ್ನಿಗೆ ಎರಡು ರೂಪಾಯಿ. ಇದರಿಂದ ಹೆಚ್ಚಿಗೆ ತೊಂದರೆ ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಹೆಂಚಿನ ಬೆಲೆ ಒಂದೇ ರೀತಿಯಲ್ಲಿದೆ. ಒಂದುವೇಳೆ ಮುಫತ್ತಾಗಿ ಸೌದೆ ಕೊಟ್ಟರೂ ಹೆಂಚಿನ ಬೆಲೆ ಇಳಿಯುವುದಿಲ್ಲ. ಆದ್ದರಿಂದ ಒಂದಿಷ್ಟು ಹಣ ಈ ಬಾಬಿನಿಂದ ಬಂದು ಜನರಿಗೆ ಅನುಕೂಲವಾಗಲೆಂದೇ ಈ ರೀತಿ ಮಾಡಿದೆ.

ಶ್ರೀ ಮಲ್ಲಿಕಾರ್ಜುನಪ್ಪ ಗೌಡ.—ಮಲೆನಾಡಿನ ಕಾಡುಗಳಲ್ಲಿ ಅನೇಕವೇಳೆ ಬೆಂಕಿಬಿದ್ದು ಕಾಡೆಲ್ಲಾ ನಷ್ಟವಾಗುವುದು ತಮಗೆ ಗೊತ್ತಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಕೆಲವುಕಡೆ ಆಗುತ್ತದೆ.

ಶ್ರೀ ಮಲ್ಲಿಕಾರ್ಜುನಪ್ಪ ಗೌಡ.—ಹಾಗೆ ನುಟ್ಟು ಹೋಗುವಂಥದನ್ನು ರಿಯಾಯತಿ ದರದಲ್ಲೇಕೆ ಇವರಿಗೆ ಕೊಡಕೂಡದು ?

ಶ್ರೀ ಎಚ್. ಎಸ್. ರುದ್ರಪ್ಪ.—ನೀವು ಕೇಳುವುದು ಬಹಳ ಕಠಿಣವಾದ ಪ್ರಶ್ನೆ. ಸರ್ಕಾರಕ್ಕೆ ಆ ರೀತಿ ನಷ್ಟವಾಗುವಾಗ ಹೀಗೇಕೆ ಕೊಡಕೂಡದು ಎನ್ನುವುದಕ್ಕೆ ಉತ್ತರ ಹೇಳುವುದು ಕಷ್ಟ. ಅನೇಕ ಕಡೆ ಹಾಗೆ ನಷ್ಟವಾಗಬಹುದು. ಒಂದುವೇಳೆ ಆ ರೀತಿ ಕೊಡುವುದಕ್ಕೆ ಪ್ರಾರಂಭಿಸಿದರೆ, ರೈತರು ತಮಗೂ ರಿಯಾಯಿತಿಯ ಮೇಲೆ ಕೊಡಬೇಕೆಂದು ಕೇಳಬಹುದು. ಕೊನೆಗೆ ದುರುಪಯೋಗವಾಗುವ ಸಂಭವವಿರುವುದರಿಂದ, ಆ ರೀತಿ ಕೊಡುವುದು ಸೂಕ್ತವಲ್ಲವೆಂದು ತೀರ್ಮಾನಮಾಡಿದೆ.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಶಿವಮೊಗ್ಗ ಜಿಲ್ಲೆಯಿಂದ ಹೊರಗಡೆ ರವಾನೆಯಾಗುವ ಸೌದೆಗೂ ಇದೇ ದರವನ್ನೇ ತಾವು ಹಾಕಿರುವುದು ?

ಶ್ರೀ ಎಚ್. ಎಸ್. ರುದ್ರಪ್ಪ.—ಹೌದು.

ಶ್ರೀ ಎಸ್. ಆರ್. ನಾಗಪ್ಪ ಶೆಟ್ಟಿ.—ಭದ್ರಾವತಿ ಕಾರ್ಖಾನೆಗೆ ನರಬರಾಯಿಯಾಗುವ ಸೌದೆಗೂ ಇದೇ ದರದಲ್ಲಿ ಕೊಡುತ್ತಿದೆಯೇ ?

ಶ್ರೀ ಎಚ್. ಎಸ್. ರುದ್ರಪ್ಪ.—ಅದು ಸಾರ್ವಜನಿಕ ಸಂಸ್ಥೆಯಾದದ್ದರಿಂದ ಕಡಮೆ ದರವನ್ನು ವಿಧಿಸಿದ್ದೇವೆ. ಆದರೂ ಸಂಬಂಧಪಟ್ಟ ಮಂತ್ರಿಗಳನ್ನು ಈ ಬಗ್ಗೆ ಪರಿಶೀಲನೆ ಮಾಡಬೇಕೆಂದು ಕೇಳುತ್ತಿದ್ದೇವೆ.